# ಪತ್ರಿಕಾ ಪ್ರಕಟಣೆ

ದಿನಾಂಕ:08-10-2021 ರಂದು ಕೆಲವು ವ್ಯಕ್ತಿಗಳು ಗೂಡ್ಸ್ ವಾಹನದಲ್ಲಿ ಕಲಬುರಗಿ ನಗರಕ್ಕೆ ಅಕ್ರಮವಾಗಿ ಗಾಂಜಾ ಸಾಗಿಸುತ್ತಿದ್ದಾರೆ ಅಂತಾ ಬಾತ್ಮಿ ಬಂದ ಮೇರೆಗೆ ಪಂಚರು ಮತ್ತು ಪತ್ರಾಂಕಿತ ಅಧಿಕಾರಿಗಳು ಹಾಗೂ ತೂಕ ಮತ್ತು ಅಳತೆ ಮಾಡುವವರನ್ನು ಕರೆಯಿಸಿ ಮಾನ್ಯ ಡಿ.ಸಿ.ಪಿ. (ಕಾ&ಸು) ರವರ ಇವರ ಮಾರ್ಗದರ್ಶನದಲ್ಲಿ ಸಿ.ಇ.ಎನ್. ಪೊಲೀಸ್ ಠಾಣೆ ಕಲಬುರಗಿದ ಶ್ರೀ ವಾಹೀದ ಹುಸೇನ ಕೋತ್ವಾಲ ಪಿ.ಎಸ್.ಐ. ಮತ್ತು ಸಿಬ್ಬಂದಿಯವರಾದ ) ಶ್ರೀ ರವಿಕುಮಾರ ಎ.ಎಸ್.ಐ., 2) ದೇವೆಂದ್ರಪ್ಪ ಹೆಚ್.ಸಿ-39, 3) ಚಂದ್ರಕಾಂತ ಹೆಚ್.ಸಿ-20, 4) ಸುನೀಲಕುಮಾರ ಪಿಸಿ-570 ಮತ್ತು 5) ಹುಸೇನ ಬಾಷಾ ಎ.ಎಸ್.ಐ., ಚೌಕ ಪೊಲೀಸ್ ಠಾಣೆ, 6) ಶಿವಲಿಂಗ ಪಿಸಿ-1241 ಅಶೋಕನಗರ ಪೊಲೀಸ್ ಠಾಣೆ ರವರೊಂದಿಗೆ ಬೆಳಿಗ್ಗೆ 9-00 ಗಂಟೆಗೆ ಕಲಬುರಗಿ ನಗರದ ತಾವರಗೇರಾ ಕ್ರಾಸ್ ಹತ್ತಿರ ತಲುಪಿ ಹೋಗಿ ಬರುವ ವಾಹನಗಳನ್ನು ಪರಿಶೀಲನೆ ಮಾಡುತ್ತಿರುವಾಗ 10-30 ಗಂಟೆಗೆ ಒಂದು TATA ACE GOODS CARRIER ವಾಹನವು ಹುಮನಾಬಾದ ಕಡೆಯಿಂದ ಕಲಬುರಗಿ ಕಡೆಗೆ ಬರುತ್ತಿರುವುದನ್ನು ನೋಡಿ ಸದರಿ ವಾಹನಕ್ಕೆ ನಿಲ್ಲಿಸುವಂತೆ ತಿಳಿಸಿದ್ದು, ಸದರಿ ವಾಹನ ಚಾಲಕನು ನಮ್ಮನ್ನು ನೋಡಿ ವಾಹನ ನಿಲ್ಲಿಸದೇ ಅತೀವೇಗವಾಗಿ ಓಡಿಸಿಕೊಂಡು ಹೋದಾಗ ನಮಗೆ ಸಂಶಯ ಬಂದು ಸದರಿ ವಾಹನಕ್ಕೆ ಬೆನ್ನಟ್ಟಿ ಮುಂದೆ ಉಪಳಾಂವ ಕ್ರಾಸ್ ಹತ್ತಿರ ಹಿಡಿದು ನಿಲ್ಲಿಸಿದ್ದು ಅಷ್ಟರಲ್ಲಿ ಮುಂದುಗಡೆ ಕುಳಿತಿದ್ದ ಒಬ್ಬ ವ್ಯಕ್ತಿಯು ಓಡಿ ಹೋಗಿದ್ದು ಸದರಿ ವಾಹನ ನಂಬರ ನೋಡಲು TATA ACE GOODS CARRIER No.AP-29-V-5461 ಇದ್ದು, ಪರಿಶೀಲಿಸಿ ನೋಡಲಾಗಿ ಮುಂದುಗಡೆ ಒಬ್ಬ ಚಾಲಕ ಮತ್ತು ಹಿಂದುಗಡೆ 2ಜನ ಕುಳಿತುಕೊಂಡಿದ್ದು, ಸಿಬ್ಬಂದಿ ಜನರ ಸಹಾಯದಿಂದ ಸದರಿಯವರಿಗೆ ಕೆಳಗೆ ಇಳಿಸಿ ಅವರ ಹೆಸರುಗಳನ್ನು ವಿಚಾರಿಸಲಾಗಿ 1) ಅಕ್ರಮ ತಂದೆ ಅಲ್ಲಾಶಾ ಇನಾಮದಾರ, ವ:22 ವರ್ಷ, ಜಾತಿ:ಮುಸ್ಲಿಂ, ಉ:ಅಟೋ ಚಾಲಕ, ಸಾ:ಇಸ್ಲಾಂಪೂರ, ಜಿ:ಲಾತೂರ, 2) ಸುಮೇರ ತಂದೆ ಅಲ್ಲಾಶಾ ಇನಾಮದಾರ, ವ:21 ವರ್ಷ, ಜಾತಿ:ಮುಸ್ಲಿಂ, ಉ:ಕಾರ ಮೆಕ್ಯಾನಿಕ, ಸಾ:ಇಸ್ಲಾಂಪೂರ, ಜಿ:ಲಾತೂರ, 3) ಮೋಹನ ತಂದೆ ಕಾಶಿನಾಥ ಮೇತ್ರೆ, ವ:32 ವರ್ಷ, ಜಾತಿ:ಎಸ್.ಸಿ., ಉ:ಅಟೋಚಾಲಕ, ಸಾ:ಮಾವಿನಹಳ್ಳಿ, ತಾ:ಭಾಲ್ಕಿ, ಜಿ:ಬೀದರ ಅಂತಾ ತಿಳಿಸಿದರು. ಸದರಿ ವಾಹನವನ್ನು ಪರಿಶೀಲಿಸಿ ನೋಡಿದ್ದು, ವಾಹನಕ್ಕೆ ವೆಲ್ಡಿಂಗ್ ಮೂಲಕ ತಗಡಿನ ಸಹಾಯದಿಂದ ಎರಡು ಭಾಗಗಳಾಗಿ ಮಾಡಿದ್ದು ವಾಹನದ ಮುಂಭಾಗದಲ್ಲಿ ಒಂದು ಭಾಗಕ್ಕೆ ಚಿಕ್ಕದಾಗಿ ಚೌಕಾಕಾರವಾಗಿ ಕಿಂಡಿಯೊಂದನ್ನು ಮಾಡಿ ಅದರಲ್ಲಿ ಗಾಂಜಾದ ಪಾಕೇಟಗಳು ಇದ್ದು, ಪಂಚರ ಸಮಕ್ಷಮ ಮತ್ತು ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ಸಿಬ್ಬಂದಿಯವರ ಸಹಾಯದಿಂದ ಅವುಗಳನ್ನು ಏಣಿಸಿ ನೋಡಲಾಗಿ ಅವು ಒಟ್ಟು 170 ಪಾಕೇಟಗಳು ಇದ್ದು ಒಟ್ಟು ಅಂದಾಜು ತೂಕ 340 ಕೆ.ಜಿ. ಆಗುತ್ತಿದ್ದು, ಪ್ರತಿ ಕೆ.ಜಿ.ಗೆ ರೂ.10,000/- ರಂತೆ ಒಟ್ಟು 340 ಕೆ.ಜಿ. ಗೆ 34,00,000/- ರೂಪಾಯಿಗಳ ಮೌಲ್ಯ, ಮತ್ತು TATA ACE GOODS CARRIER No.AP-29-V-5461 ಅ.ಕಿ. ರೂ.1,00,000/- ಹೀಗೆ ಒಟ್ಟು ರೂ.35,00,000/- ಮೊತ್ತದ ಮುದ್ದೇಮಾಲನ್ನು ಪಂಚರ ಸಮಕ್ಷಮ ಜಪ್ತು ಮಾಡಿಕೊಂಡಿದ್ದು ಇರುತ್ತದೆ.

ನಂತರ ಜಪ್ತಿ ಪಂಚನಾಮೆ, ಮುದ್ದೇಮಾಲು ಮತ್ತು ಆರೋಪಿತರೊಂದಿಗೆ ಸಿ.ಇ.ಎನ್. ಠಾಣೆಗೆ ಹಾಜರಾಗಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಕೊಟ್ಟ ಫಿರ್ಯಾದು ಸಾರಾಂಶದ ಮೇಲಿಂದ ಸಿ.ಇ.ಎನ್. ಪೊಲೀಸ್ ಠಾಣೆ ಗುನ್ನೆ ನಂ.20/2021 ಕಲಂ 20(ಬಿ)(ii)(A) NDPS Act ಪ್ರಕಾರ ಪ್ರಕರಣ ದಾಖಲಿಸಿ ತನಿಖೆ ಕೈಕೊಂಡಿದ್ದು ಇರುತ್ತದೆ.

Scanned with CamScanner